# ಬೊಂಬಾಯಿ!

ಈತ ಆಫ್ರಿಕಾ ಖಂಡದ ಅಂಗೋಲಾ ದೇಶದ 20ರ ಹರೆಯದ ಯುವಕ. ಫ್ರಾನ್ಸಿಸ್ಕೊ ಡಾಯಿಂಗೊ ಜಾಕ್ವಿಂ ಎಂಬ ಹೆಸರಿನ ಈತನ ಬಾಯಿ ನಿಜಕ್ಕೂ ಬೊಂಬಾಯಿ! ಈತನಷ್ಟು ಬಾಯಿ ಹಿಗ್ಗಿಸುವ ಶಕ್ತಿ ಜಗತ್ತಿನಲ್ಲಿ ಯಾರಿಗೂ ಇಲ್ಲ. ಈತನ ಹೆಸರು ಈಗಾಗಲೇ ಗಿನ್ನಿಸ್ ವಿಶ್ವ ದಾಖಲೆ ಪುಸ್ತಕದಲ್ಲಿ ಸೇರಿಯಾಗಿದೆ.

ಈ ದೊಡ್ಡ ಬಾಯಿಯ ಸರದಾರನೊಂದಿಗೆ ಸ್ಪರ್ಧಿಸಲು ಬಂದ ಅನೇಕರು ಚಹಾ ಕಪ್ಪು, ಬಸಿ (ಸಾಸರ್), ಬೀರ್ ಬಾಟಲಿಗಳನ್ನು ಬಾಯಿಗೆ ತುರುಕಿಕೊಂಡರೆ ಫ್ರಾನ್ಸಿಸ್ಕೊ ಕೋಕಾ ಕೋಲಾ ಕ್ಯಾನನ್ನೇ ಬಾಯಿಗೆ ಹಾಕಿಕೊಂಡು ಎಲ್ಲರಲ್ಲೂ ಅಚ್ಚರಿ ಉಂಟು ಮಾಡಿದ್ದ. ಅಂಗೋಲಾ ದೇಶದ ರಾಜಧಾನಿ ಲುವಾಂಡಾದಲ್ಲಿ ಈತ ನೀಡಿದ ಈ ಪ್ರದರ್ಶನ ಈತನನ್ನು ತಾರಾ ಪಟ್ಟಕ್ಕೆ ಏರಿಸಿದೆ. ಅಂದ ಹಾಗೆ ಈತ ಒಂದೇ ನಿಮಿಷದಲ್ಲಿ 14 ಬಾರಿ ಕ್ಯಾನನ್ನು ಬಾಯಿಗೆ ಹಾಕಿ ಹೊರ ತೆಗೆದನಂತೆ!

ಒಬ್ಬ ವ್ಯಕ್ತಿ ಹೆಚ್ಚೆಂದರೆ 3–4 ಅಂಗುಲದಷ್ಟು ಬಾಯಿ ಅಗಲಿಸಬಹುದು. ರಬ್ಬರಿನಂತೆ ಹಿಗ್ಗುವ ಬಾಯಿಯ ಫ್ರಾನ್ಸಿಸ್ಕೊ ಅರ್ಧ ಅಡಿಗಿಂತಲೂ ಹೆಚ್ಚು, ಅಂದರೆ 6.79 ಅಂಗುಲದಷ್ಟು ಅಗಲಕ್ಕೆ ಬಾಯಿ ತೆರೆಯುತ್ತಾನೆ!

ದಂತವೈದ್ಯರ ಕೆಲಸ ಸುಲಭವಾಯಿತು ಅನ್ನೋಣವೇ?

■ ಸುಭಾಸ ಯಾದವಾಡ




